International Journal of Leading Research Publication (IJLRP)

E-ISSN: 2582-8010 ● Website: www.ijlrp.com ● Email: editor@ijlrp.com

# ಜನಪದ ಹಾಡುಗಳಲ್ಲಿ "ತಾಯಿ"

**ಡಾ. ಅಂಜನಪ್ಪ ಡಿ. ಕೆ**[1]

[1]ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಮಂಜುನಾಥಸ್ವಾಮಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ, ಕರ್ನಾಟಕ.

**ಲೇಖನ ಸಾರಾಂಶ:**

*ಜನಪದ ಗೀತೆಗಳು ನಮ್ಮ ಸಂಸ್ಕೃತಿಯ ಅತಿ ಪ್ರಾಚೀನ ಮತ್ತು ಅಮೂಲ್ಯ ಭಾಗವಾಗಿವೆ. ಇವು ಸಾಮಾನ್ಯ ಜನರ ಜೀವನ, ಸಂಸ್ಕೃತಿ, ಭಾವನೆಗಳು ಮತ್ತು ಆಚರಣೆಗಳನ್ನು ಪ್ರತಿಬಿಂಬಿಸುತ್ತವೆ. ಜನಪದ ಗೀತೆಗಳಲ್ಲಿ ತಾಯಿ ಪಾತ್ರವು ವಿಶೇಷ ಸ್ಥಾನವನ್ನು ಹೊಂದಿದೆ. ತಾಯಿ ಎಂಬುದು ಪ್ರೀತಿ, ಕಾಳಜಿ, ತ್ಯಾಗ ಮತ್ತು ಜೀವನದ ಮೂಲದ ಸಂಕೇತವಾಗಿದೆ. ಈ ಲೇಖನದಲ್ಲಿ ಜನಪದ ಗೀತೆಗಳಲ್ಲಿ ತಾಯಿಯ ಬಗ್ಗೆ ಹಾಡುವಾಗ, ಅವಳ ಪ್ರೀತಿ ಮತ್ತು ತ್ಯಾಗವನ್ನು ಸಾಂಸ್ಕೃತಿಕ ದೃಷ್ಟಿಕೋನದಿಂದ ವರ್ಣಿಸಲಾಗುತ್ತದೆ. ತಾಯಿ ಮಕ್ಕಳಿಗೆ ನೀಡುವ ಮಾರ್ಗದರ್ಶನ, ಅವರ ಭವಿಷ್ಯ ನಿರ್ಮಾಣದಲ್ಲಿ ತಾಯಿಯ ಪಾತ್ರ ಮತ್ತು ಕುಟುಂಬದ ಸ್ಥಿರತೆಯಲ್ಲಿ ಅವಳ ಮಹತ್ವವನ್ನು ಜನಪದ ಗೀತೆಗಳು ಸುಂದರವಾಗಿ ವ್ಯಕ್ತಪಡಿಸುತ್ತವೆ. ಈ ಗೀತೆಗಳು ಸಾಮಾನ್ಯವಾಗಿ ಸರಳ ಭಾಷೆಯಲ್ಲಿ, ಮಧುರವಾದ ಲಯದಲ್ಲಿ ಹಾಡಲ್ಪಡುವುದರಿಂದ ಜನರ ಮನಸ್ಸಿಗೆ ತಲುಪಲು ಸುಲಭವಾಗುತ್ತದೆ. ತಾಯಿಯ ಬಗ್ಗೆ ಇರುವ ಭಾವನೆಗಳನ್ನು ಜನಪದ ಗೀತೆಗಳು ಹೃದಯಸ್ಪರ್ಶಿಯಾಗಿ ವ್ಯಕ್ತಪಡಿಸುತ್ತವೆ ಮತ್ತು ನಮ್ಮ ಸಂಸ್ಕೃತಿಯ ಮೂಲಭೂತ ಮೌಲ್ಯಗಳನ್ನು ಉಳಿಸುವಲ್ಲಿ ಸಹಾಯ ಮಾಡುತ್ತವೆ.*

***ಮುಖ್ಯ ಪದಗಳು:*** *ಜಾನಪದ ಹಾಡು, ತಾಯಿ, ಗೀತೆಗಳು, ಮಹಿಳೆ, ತಾಯಿಯ ವೈಶಿಷ್ಟ್ಯ*

## 1.1 ಪ್ರಸ್ತಾವನೆ:

ಜನಪದ ಹಾಡುಗಳು ಗ್ರಾಮೀಣ ಜನರ ಬದುಕಿನ ವಿವಿಧ ಸ್ತರಗಳನ್ನು ಮನಮುಟ್ಟುವಂತೆ ತಿಳಿಸುತ್ತವೆ. ಈ ಜನಪದ ಹಾಡುಗಳು ಜನ್ಮ ಪಡೆದದ್ದು ತನ್ನ ಸಂತೋಷಕ್ಕಾಗಿ, ತನ್ನಂತೆ ಇರುವ ಮತ್ತೊಬ್ಬರ ಸಂತೋಷಕ್ಕಾಗಿ ರಚನೆಗೊಂಡ ಮೌಖಿಕ ಸಾಹಿತ್ಯ. ಇದರಲ್ಲಿ ತಮ್ಮ ದಿನದ ನೋವು-ನಲಿವು, ತಾವು ಆಚರಿಸುವ ಹಬ್ಬ-ಹರಿದಿನಗಳು, ವಿನೋದದ ಸಂದರ್ಭಗಳು, ನಂಬಿಕೆ ಆಚರಣೆಗಳು, ತಮ್ಮ ಬದುಕಿನ ರೀತಿ-ನೀತಿ, ಬದುಕಿನ ವಿವಿಧ ಘಟನೆಗಳ ಪರಿಚಯ ಮಾಡಿಕೊಡುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿವೆ. ಇದರಲ್ಲಿ ಮಹಿಳೆಯರ ಆಂತರಿಕ ಶಕ್ತಿ, ಸಾಮಾಜಿಕ ಅರಿವು ಮತ್ತು ಪ್ರತಿರೋಧವನ್ನು ಕಾಣುತ್ತೇವೆ. ಅಂತೆಯೇ ಹೆಣ್ಣು ಮಕ್ಕಳಿಗಾಗಿ ಮತ್ತು ಹೆಣ್ಣು ಮಕ್ಕಳಿಂದಲೆ ಹುಟ್ಟಿದ ಜನಪದ ಹಾಡುಗಳಲ್ಲಿ ತಾಯಿಯ ಕುರಿತ ವಿಷಯಗಳ ಅವಲೋಕನ ಈ ಲೇಖನದ ಉದ್ದೇಶವಾಗಿದೆ.

ಜನಪದ ಸಾಹಿತ್ಯದ ರಚನೆಕಾರರು ಅನಕ್ಷರಸ್ತರಾಗಿದ್ದರೂ ತಮ್ಮ ಸೃಜನಶೀಲಯ ಸೃಷ್ಟಿಯಿಂದ ಅತ್ಯುನ್ನತವಾದ ಸಾಹಿತ್ಯ ನೀಡಿದ್ದಾರೆ. ಜನಪದ ಸಾಹಿತ್ಯಕ್ಕೆ ಮತ್ತು ನಮ್ಮ ಬದುಕಿಗೆ ಅವಿನಾಭಾವ ಸಂಬಂಧವಿದೆ. ನಮ್ಮ ಸಂಸ್ಕೃತಿಯ ಸತ್ವ, ಧಾರ್ಮಿಕ ಆಯಾಮವಿದೆ. ಅಂತೆಯೆ ಜನಪದ ಹಾಡುಗಳಲ್ಲಿ 'ತಾಯಿ' ಎಂದರೆ ಜಗದ ಮೂಲ, ಮಮತೆ-ಮಾನವೀಯತೆಯ ಮೂಲ. ಈ ಜನಪದ ಸಾಹಿತ್ಯದಲ್ಲಿ ತಾಯಿಯನ್ನು ಲಾಲಿಹಾಡುಗಳು, ಜನಪದ ಕಥೆಗಳು, ತ್ರಿಪದಿಗಳು ಮತ್ತು ವಿವಿಧ ಸಾಂಪ್ರದಾಯಿಕ ಹಾಡುಗಳ ಮೂಲಕ ವೈಭವಿಕರಿಸಲಾಗಿದೆ. ಜೊತೆಗೆ ತಾಯಿಯು ವಿಶ್ವರೂಪಿಯಾಗಿ ಶಕ್ತಿಯಾಗಿ, ತ್ಯಾಗದ

ಪ್ರತೀಕವಾಗಿ ಮತ್ತು ಬದುಕಿನ ಅಖಂಡ ಶಕ್ತಿಯಾಗಿ ಜನಪದ ಹಾಡುಗಳಲ್ಲಿ ಕಂಡುಬರುತ್ತಾಳೆ. ಜನಪದ ಹಾಡುಗಳಲ್ಲಿ ಹೆಣ್ಣಿಗೆ ತಾಯಿಯಾಗುವ ಅಪರಿಮಿತ ಹಂಬಲ, ತಾಯಿಯಾಗದಿದ್ದಾಗ ಕೊರಗುವುದು, ಮಕ್ಕಳ ಪಡೆಯಲು ಅವಳು ಪಡುವ ಯಾತನೆ ತಾಯಿಯಾದಾಗ ತನ್ನ ಮಗುವಿನ ಆಟಗಳನ್ನು ಕಂಡು ಆನಂದ ಪಡುವುದು, ಹೆಣ್ಣುಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವಾಗ ತಾಯಿ ಮಗಳಿಗೆ ಹೇಳುವ ಬುದ್ಧಿವಾದ ಇತ್ಯಾದಿ ವಿಷಯಗಳು ಜನಪದ ಹಾಡುಗಳಲ್ಲಿ ಕಂಡುಬರುತ್ತವೆ. ಈ ಹಿನ್ನೆಲೆಯಲ್ಲಿ ತಾಯಿಯಾಗುವ ಹಂಬಲ, ತಾಯಿ ಮತ್ತು ಮಗನ ಸಂಬಂಧ, ತಾಯಿ ಮತ್ತು ಮಗಳ ಸಂಬAಧ, ಮಗಳು ಮತ್ತು ತಾಯಿ ಸಂಬಂಧದ ಅಭಿವ್ಯಕ್ತಿನ್ನೊಳಗೊಂಡ ಜನಪದ ಹಾಡುಗಳ ಹಿನ್ನೆಲೆಯಲ್ಲಿ ಅವಲೋಕಿಸಬಹುದು.

### 1.2 ಜಾನಪದ ಹಾಡುಗಳಲ್ಲಿ ತಾಯಿಯ ಶ್ರೇಷ್ಠತೆ:

ತಾಯಿಯಾಗುವುದು ಹೆಣ್ಣಿನ ಬದುಕಿಗೆ ಭೂಷಣ ತಾಯಿಯಾಗದ ಹೆಣ್ಣು ಹೆಣ್ಣೆ? ಎಂಬ ಮಾತುಂಟು. ಮಕ್ಕಳಾಗದ ಬಂಜೆ ಬೇರೆಯವರ ಮಕ್ಕಳನ್ನು ಮುಟ್ಟಭಾರದು ಎಂಬ ನಂಬಿಕೆಗಳಿಂದ ಹೆಣ್ಣು ಸಾಕಷ್ಟು ಅಪಮಾನ ನಿಂದನೆಗೆ ಗುರಿಯಾಗುತ್ತಿದ್ದಳು ಆದ್ದರಿಂದ ಮಕ್ಕಳಾಗದ ಹೆಣ್ಣು ಮಕ್ಕಳಿಗಾಗಿ ಹಂಬಲಿಸುತ್ತ ಚಿಂತಿಸುತ್ತಾಳೆ. ಬಂಜೆ ಜೀವನದಲ್ಲಿ ಹೆಜ್ಜ-ಹೆಜ್ಜಗೂ ಮಕ್ಕಳಿಗಾಗಿ ಚಿಂತಿಸುತ್ತ ಕೊರಗುತ್ತಾಳೆ. ಅಂತಹ ಹೆಣ್ಣು ಮಗಳ ಚಿಂತೆಯ ಕುರಿತು ಜನಪದ ಹಾಡೊಂದರಲ್ಲಿ ಹೇಳುವುದು ಹೀಗೆ-

ಬಾಲಕರಿಲ್ಲದ ಬಾಲಿಯದ್ಯಾತರ ಜನ್ಮ
ಬಾಡಿರಿಗೆ ಎತ್ತು ದಡಿದ್ಹಂಗ | ಬಾಳೆಲೆಯ

ಹಾಸುಂಡು ಬೀಸಿ ಒಗದ್ಹಂಗ|| ಎಂದು ಹೆಣ್ಣಾಗಿ ಹುಟ್ಟಿದವಳು ತಾಯಿಯಾಗಬೇಕು. ತಾಯಿತನವಿಲ್ಲದ ಬದುಕು ಗಂಡನ ಮನೆಯಲ್ಲಿ ಬಾಡಿಗೆ ಎತ್ತುಗಳು ದುಡಿದಂತೆ. ಅಲ್ಲದೆ ಗಂಡನು ಹಾಸಿ ಊಟ ಮಾಡಿ ಬಿಸಾಕಿದ ಬಾಳೆಯ ಎಲೆಯಂತೆ ಮಕ್ಕಳಿಲ್ಲದವಳ ಬದುಕು ಎಂದು ಹೇಳಲಾಗಿದೆ. ಮಕ್ಕಳಿಲ್ಲದೆ ತಾನು ಹೆಣ್ಣಾಗಿ ಬಾಳುವುದೇ ಹಂಗು. ಈ ಹಂಗಿನ ಜೀವ ಬೇಡವೆಂದು ದೇವದೇವತೆಗಳಲ್ಲಿ ಬೇಡಿಕೊಳ್ಳುವುದು ಜನಪದ ಹಾಡುಗಳಲ್ಲಿದೆ. ಅಂತ್ತೆಯೆ-

ಕಂದನ ಕೊಡುಶಿವನೆ ಬಂದನ ಬಿಡಲಾರೆ
ಹಂಗೀನ ಬಾನ ಉಣಲಾರೆ | ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ|| ಎಂದು ತಿಳಿಸುತ್ತದೆ.

ಬಂಜೆಯಾದವಳಿಗೆ ಮಕ್ಕಳಿಲ್ಲದಿರುವುದು ದೊಡ್ಡ ಮನೋರೋಗವಾಗಿ ಕಾಡುವುದನ್ನು ಈ ಪದ್ಯದಲ್ಲಿ ಕಾಣಬಹುದು. ಮಕ್ಕಳಾಗಲೆಂದು ಹಂಬಲಿಸಿ ದೇವರಿಗೆ ಹರಕೆ ಹೋರುತ್ತಾಳೆ. ಹೆಣ್ಣಾಗಿ ಹುಟ್ಟಿದ ಮೇಲೆ ಹೆಣ್ಣುತನದ ಪರಿಪೂರ್ಣತೆ ಮಕ್ಕಳ ಹಡೆದು, ಮಕ್ಕಳನ್ನಾಡಿಸಿದಾಗ ಎಂಬುದರ ಬಗ್ಗೆ ಒಂದು ಹಾಡಲ್ಲಿ ಹೇಳುವುದು ಹೀಗೆ-

ಹೆಣ್ಣು ಜನುಮಾಕೆ ಬಂದೆ, ಮಣ್ಣು ಮಾಡಲಿ ಬ್ಯಾಡ
ಹೆಣ್ಣುತನ ಶಿವನೆ ಜಗದಾಗ | ಕೈ ಮುಗಿವೆ.
ಕಂದನ್ನ ಕೊಟ್ಟು ಕಡಿಮಾಡು ||

ಎಂದು ಮಕ್ಕಳಿಗಾಗಿ ದೇವರ ಮುಂದೆ ಕೈಮುಗಿದು ಆರ್ತತೆಯಿಂದ ಬೇಡಿಕೊಂಡಿದ್ದಾಳೆ. ಮತ್ತೊಂದು ಹಾಡಿನಲ್ಲಿ ಹೆಣ್ಣಿಗೆ ತನ್ನ ಬದುಕಲ್ಲಿ ಬಂಜೆತನವೆಂಬುದು ದೊಡ್ಡ ಕೊರಗು ಇದರಿಂದ ಬೇಸತ್ತ ಹೆಣ್ಣುಮಗಳೊಬ್ಬಳು-

ಹೆಣ್ಣು ಆಗುದುಕ್ಕಿಂತ, ಮಣ್ಣು ಆಗುದು ಲೇಸು
ಮಣ್ಣೀನ ಮ್ಯಾಲ ಮರವಾಗಿ | ಬೆಳೆದರ

ಬಂದ ಹೋದವರಿಗೆ ನೆರಳಾಗಿ||

ಎಂದು ಬಂಜೆತನದ ಬದುಕು ಕಳೆಯುವುದಕ್ಕಿಂತ ಮಣ್ಣಾದರಾಗಲೆಂದು ಹಾಡಿ ಸಮಾದಾನ ಮಾಡಿಕೊಂಡ ಹೆಣ್ಣೊಬ್ಬಳ ಮನಸ್ಥಿತಿಯನ್ನು ಇಲ್ಲಿ ಕಾಣತ್ತೇವೆ. ಹೀಗೆ ತಾಯಿ ತನಕ್ಕಾಗಿ ಹಂಬಲಿಸುವ ಮನಸ್ಥಿತಿಯನ್ನು ಈ ಪದ್ಯದೊಳಗೆ ಕಾಣಬಹುದು.

ತಾಯಿಗೆ ತನ್ನ ಮಕ್ಕಳ ಮೇಲೆ ಇರುವ ವಾತ್ಸಲ್ಯವನ್ನು ಅನೇಕ ಜನಪದ ಹಾಡುಗಳು ವ್ಯಕ್ತಪಡಿಸಿವೆ. ಅಂತೆಯೇ ಮಕ್ಕಳಾದ ತರುವಾಯ ಬಂಜೆತನದಿಂದ ಮುಕ್ತಳಾದನಲ್ಲ ಎಂಬ ಸಂತೋಷದಿAದ ತೊಟ್ಟಿಲಲ್ಲಿ ಮಲಗಿದ ಮಗನನ್ನು ಕಂಡು ಆತ್ಮತೃಪ್ತಿಯಿಂದ ಹಾಡುವುದನ್ನು ಕಾಣಬಹುದು ಉದಾಃ

ತೊಟ್ಟಿಲಗೊಂದು ತೊಳೆದ ಮುತ್ತನು ಕಂಡೆ
ಹೊಟ್ಟೆ ಮೇಲಾಗಿ ಮಲಗ್ಯಾನ | ಕಂದೈಗ
ಮುತ್ತಿನಾ ದಿಟ್ಟ ತಗದೇನ ||

ಎಂದು ತೊಟ್ಟಿಲಲ್ಲಿ ಮಲಗಿದ ಕಂದನಿಗೆ ದೃಷ್ಟಿತಗಲುವುದೆಂದು ಮುತ್ತಿನ ದೃಷ್ಟಿ ತೆಗೆಯುವ ಹಂಬಲ ವ್ಯಕ್ತವಾಗಿದೆ. ಇಲ್ಲಿ ತಾಯಿ ತನ್ನ ಮಗನ ಪ್ರತಿಯೊಂದು ವರ್ಗನೆ ನೋಡಿ ಸಂತೋಷ ಪಡುವುದರ ಜೊತೆಗೆ ಮಗುವೆ ತನ್ನ ಪ್ರಪಂಚವಾಗಿರುವುದನ್ನು ಕಾಣುತ್ತೇವೆ. ಮಗು ಬೆಳೆದಂತೆ ಆಟವಾಡಲು ಪ್ರಾರಂಭಿಸುತ್ತದೆ. ಆಟವಾಡುವಾಗ ಮಗುವಿನ ಪ್ರತಿಯೊಂದು ವರ್ತನೆಯು ತಾಯಿಗೆ ಚಂದವಾಗಿರುತ್ತದೆ. ಅಂತಹ ವರ್ತನೆಯ ಕುರಿತು ಜನಪದ ಹಾಡೊಂದು ಬಣ್ಣಿಸುವುದು ಹೀಗೆ-

ಆಡಿ ಬಾ ನನಕಂದ ಅಂಗಾಲ ತೊಳದೇನ
ತೆಂಗಿನ ಕಾಯಿ ತಿಳಿನೀರ | ತಕ್ಕೊಂಡು
ಬಂಗಾರದ ಮಾರಿ ತೊಳದೇನ ||

ಎಂದು ತಾಯಿಯೊಬ್ಬಳು ಹಾಡಿದ್ದಾಳೆ. ಮಗು ತನ್ನ ಕೈ ಕಾಲುಗಳು ಎಷ್ಟೇ ಹೊಲಸು ಮಾಡಿಕೊಂಡರು ಸಂತೋಷದಿಂದ ನಾನು ತೊಳೆಯುತ್ತೇನೆ ಎಂಬ ತಾಯಿಯ ಅನನ್ಯ ಪ್ರೀತಿಯ ಕುರಿತು ವ್ಯಕ್ತವಾಗಿದೆ. ಮತ್ತೊಂದು ಹಾಡಲ್ಲಿ ಮನೆಗೆ ಮಗುವೇ ಭೂಷಣ ಮಗು ಮನೆಯಲ್ಲಿ ಓಡಾಡಿದರೆ ಮನೆಯವರ ಸಂತೋಷಕ್ಕೆ ಸಮಾನವಾದುದು ಮತ್ತೊಂದಿಲ್ಲ ಎಂಬುದನ್ನು ಹೇಳುವುದು ಹೀಗೆ-

ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕ
ಕೂಸು ಕಂದಯ್ಯ ಒಳ ಹೊರಗೆ | ಆಡಿದರೆ
ಬೀಸಣಿಕೆ ಗಾಳಿ ಸುಳಿದಾವ ||

ಎಂದು ಹಾಡುವುದನ್ನು ಕಾಣುತ್ತೇವೆ. ಇಲ್ಲಿ ಬೀಸಣಿಕೆ ತಂಪು ನೀಡಿದಂತೆ ಮನೆಯೊಂದರಲ್ಲಿ ಮಗು ಓಡಾಡುವುದೇ ಮನೆಯವರೆಲ್ಲರ ಮನಸ್ಸಿಗು ತಂಪು ಎಂದು ವರ್ಣಿಸಲಾಗಿದೆ,

ಸಂಸಾರವೆಂಬುದು ಸಾಗರದಂತೆ ಅದರಲ್ಲಿ ಸಾಕಷ್ಟು ಕಷ್ಟ-ಸುಖ ನೋವು-ನಲಿವುಗಳುಂಟು. ಅದರಲ್ಲಿ ತಾಯಿಯಾದವಳು ಸಂಸಾರದ ಪ್ರತಿಯೋಂದು ಘಟನೆಗಳಲ್ಲಿ ತನ್ನನ್ನು ತೊಡಗಿಸಿಕೊಂಡು, ಹಗಲು-ರಾತ್ರಿಯೆನ್ನದೆ ದುಡಿಯುತ್ತಾಳೆ. ಹೀಗೆ ದುಡಿಯುವ ತಾಯಿಯೊಬ್ಬಳು ಬೆಸರವಾದಾಗ ಅವಳಿಗುಂಟಾದ ಬೇಸರ ದೂರವಾಗುವುದು ಹೇಗೆಂದು ಜನಪದ ಹಾಡೊಂದರಲ್ಲಿ ಹೇಳುವುದು ಹೀಗಿದೆ-

ಆಸರಕಿ ಬ್ಯಾಸರಕಿ ಯಾರಿಂದ ಕಳೆಯಾಲೇ
ಕೂಸು ಕಂದಯ್ಯ ತೊಡಿಮ್ಯಾಲ | ಆಡಿದರೆ
ಬಂದ ಬ್ಯಾಸರಕಿ ಬಯಲಾಗೆ ||

ಇಲ್ಲಿ ದಿನವಿಡಿ ದುಡಿದು ದಣಿದ ತಾಯಿಗೆ ತನ್ನ ಕಂದ ಅವ್ವಾ ಎಂದು ಓಡಿ ಬಂದು ತನ್ನ ತೊಡೆಯ ಮೇಲೆ ಕುಳಿತೊಡನೆ ಅವಳ ದಣಿವೆಯಲ್ಲ ದೂರವಾಗುತ್ತದೆಂದು ಹಾಡಿರುವುದನ್ನು ಕಾಣುತ್ತೇವೆ. ತಾಯಿಯಾದವಳಿಗೆ ತನ್ನ ಮಕ್ಕಳೆ ಪ್ರಪಂಚ. ಮಕ್ಕಳಿಗಿಂತ ಸುಂದರವಾದುದು ಅವಳಿಗೆ ಬೇರೊಂದಿಲ್ಲ.

ಮಗುವಿನ ಒಂದೊಂದು ಅಂಗಾಗವನ್ನು ಒಂದೊಂದು ರೀತಿಯಾಗಿ ವರ್ಣಿಸುವುದು ಜನಪದ ಹಾಡುಗಳಲ್ಲುಂಟು. ಅಂತೆಯೆ ತಾಯಿಯೊಬ್ಬಳು ತನ್ನ ಮಗುವನ್ನು ವರ್ಣಿಸುವುದು ಹೀಗೆ-

ಅಳುವ ಕಂದನ ತುಟಿಯು ಹವಳದ ಕುಡಿಯ್ಹಂಗ
ಕುಡಿಹುಬ್ಬು ಬೇವಿನೆಸಳ್ಹಂಗ | ಕಣ್ನೋಟ
ಶಿವನ ಕೈ ಅಲಗು ಹೊಳೆದ್ಹಂಗ ||

ಎಂದು ಹೇಳಿದ್ದಾಳೆ ಇಲ್ಲಿ ಅಳುವ ತನ್ನ ಕಂದನಲ್ಲಿಯೆ ಅಂದವನ್ನು ಕಾಣುತ್ತಾಳೆ. ತಾಯಿಗೆ ಮಗ ಬೆಳೆದು ದೊಡ್ಡವನಾದ ನಂತರ ಮಗುವಿಗೆ ತಕ್ಕ ಸೊಸೆಯ ತಂದು ಮದುವೆ ಮಾಡುತ್ತಾಳೆ. ಅವಳು ತನಗೆ ಹೊಂದಿಕೊಳ್ಳದಿದ್ದಾಗ, ಮಗ ಕೂಡ ಹೆಂಡತಿಯ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವಾಗ ತಾಯಿ ಮಗನ ಮೇಲೆ ಕೋಪಗೊಳ್ಳದೆ ಅವನ ಮೇಲೆ ಮಮತೆ ತೋರುತ್ತಾಳೆ. ಅಂತಹ ಸನ್ನಿವೇಶವನ್ನು ಜನಪದ ಹಾಡಿನಲ್ಲಿ ಕಾಣುತ್ತೇವೆ.

ಮಗ ನಿನ್ನ ಹಡಿಲಾಕ ಮುಗಿಲ ಮುಟ್ಟಿತ ಜೀವ
ಮದನಾರಿ ನನ್ನ ಸೊಸಿ ಬಂದು | ನಡಿದಾಗ
ಮಗ ನಿನ್ನ ಮನವು ಎರಡಾಗಿ ||

ಎನ್ನುತ್ತಾಳೆ. ಇಲ್ಲಿ ಮಗನಿಗೆ ತನ್ನ ತಾಯಿಯ ಮೇಲಿದ್ದ ಪ್ರೀತಿ ಸೊಸೆ ಬಂದ ಮೇಲೆ ದೂರವಾಯಿತು ಎಂದು ಕೊರಗುವುದ ಕಾಣತ್ತೇವೆ. ಜೊತೆಗೆ ಮಗನಲ್ಲಾದ ಬದಲಾವಣೆಗೆ ಸೊಸೆಯನ್ನು ಹೊಣೆ ಮಾಡುತ್ತಾಳೆಯೇ ಹೊರತು ತನ್ನ ಮಗನನ್ನಲ್ಲ ಎಂಬುದು ಸ್ಪಷ್ಟಗೊಂಡಿದೆ. ಅಲ್ಲದೆ ಮಗ ಏನೆ ಮಾಡಿದರು ತಾಯಿಗೆ ಮಗನಲ್ಲಿ ಮಮತೆಯೊಂದಿರುವುದನ್ನು ಕಾಣುತ್ತೇವೆ.

ತಾಯಿಗೆ ತನ್ನ ಮಕ್ಕಳಲ್ಲಿ ಗಂಡು-ಹೆಣ್ಣು ಎಂಬ ಬೇಧ ಇರುವುದಿಲ್ಲ. ಇಬ್ಬರನ್ನು ಸಮಾನವಾಗಿ ಪ್ರೀತಿಸುತ್ತಾಳೆ ಅಂತೆಯೆ ತಾಯಿಗೆ ಮಗಳ ಮೇಲೆ ಅಪಾರ ಪ್ರೀತಿ. ಮಗಳ ಅಂದ ಚಂದವನ್ನು ಎಷ್ಟು ವರ್ಣಿಸಿದರೂ ತಾಯಿಗೆ ತೃಪ್ತಿಯಿಲ್ಲ. ತಾಯಿಯೊಬ್ಬಳು ತನ್ನ ಮಗಳನ್ನು ವರ್ಣಿಸುವುದು ಹೀಗಿದೆ.

ಮಲ್ಲೀಗಿ ಹೂವೇ ಇಲ್ಯಾಕೆ ನಿಂತಿದ್ದಿ
ಎಲ್ಲಾರ ಕಣ್ಣು ನಿನ ಮೇಲೆ | ಕಂದವ್ವ
ವಲ್ಲಿ ಸೆರಗೆಲ್ಲ ಪರಿಮಳ ||

ಎಂದು ಬಾಗಿಲ ಮುಂದೆ ನಿಂತ ಮಗಳನ್ನು ಕಂಡು ಅಕ್ಕರೆಯಿಂದ ಮಲ್ಲಿಗೆ ಹೂವೆಂದು ಹೇಳುತ್ತಾಳೆ. ಮಗಳ ಚಂದ ಕಂಡು ಓಣಿಯ ಜನರ ಕಣ್ಣು ಬಿದ್ದಾವು ಎಂಬ ಆತಂಕ ವ್ಯಕ್ತವಾಗಿದೆ. ಮತ್ತೊಂದು ಜನಪದ ಹಾಡಿನಲ್ಲಿ-

ಹೆಣ್ಣಿದ್ದ ಮನೆಗೆ ಕನ್ನಡಿ ಯಾತಕ್ಕ
ಹೆಣ್ಣು ಸಣ್ಣವಳು ಒಳಗಿರಲು | ನನ ಮಗಳು
ಕನ್ನಡಿಯಂಗ ಹೊಳೆಯುವಳು||

ಎಂದು ಮಗಳು ಮನೆಯಲ್ಲಿದ್ದರೆ ತಾಯಿಗೆ ಕನ್ನಡಿಯ ಅವಶ್ಯಕತೆಯೇ ಇಲ್ಲವಾಗುತ್ತದೆ. ಇಲ್ಲಿ ಮಗಳ ಸೌಂದರ್ಯದ ಬಗ್ಗೆ ತಾಯಿಯ ಕಲ್ಪನೆ ಅನನ್ಯವಾದುದು ಮಗಳು ಬೆಳೆದಂತೆ ತಂದೆ-ತಾಯಿಗೆ ಅವಳ ಮದುವೆಯ ಚಿಂತೆ, ಅಂತೆಯೆ ಮಗಳನ್ನು ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುವ ಸಂದರ್ಭದಲ್ಲಿ ಗಂಡನ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಾಯಿ ಮಗಳಿಗೆ ಹೇಳಿಕಳುಹಿಸುವುದು ಜನಪದ ಹಾಡುಗಳಲ್ಲಿ ವ್ಯಕ್ತವಾಗಿದೆ.

ಅತ್ತೆಯ ಮನಿಯಾಗ ಮುತ್ತಾಗಿ ಇರಬೇಕ
ಹೊತ್ತಾಗಿ ನೀಡಿದರ ಉಣಬೇಕ | ನನ ಮಗಳ
ತವರಿಗ ಹೆಸರ ತರಬೇಡ ||

ಇಲ್ಲಿ ಮುತ್ತು ಎಲ್ಲರಿಗೂ ಹೇಗೆ ಆಕರ್ಷಕವೋ ಅದೇ ರೀತಿ ಗಂಡನ ಮನೆಯಲ್ಲಿ ಎಲ್ಲರಿಗು ಪ್ರಿಯವಾಗಿರಬೇಕು. ಮನೆಯವರೆಲ್ಲ ಊಟ ಮಾಡಿದ ನಂತರ ತಾನು ಊಟ ಮಾಡಬೇಕು. ಜೊತೆಗೆ ತವರಿಗೆ ಒಳ್ಳೆಯ ಹೆಸರು ತರಬೇಕು ಎಂದು ತಾಯಿ ತನ್ನಂ ಮಗಳಿಗೆ ಬುದ್ದಿಮಾತುಗಳನ್ನೇಳಿ ಕಳೂಹಿಸಿಕೊಟ್ಟಿರುವುದನ್ನು ಕಾಣುತ್ತೇವೆ. ತಾಯಿ ಮಕ್ಕಳ ಪ್ರತಿಯೊಂದು ಬೆಳವಣಿಗೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಉಜ್ವಲವಾದ ತನ್ನ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿರುವುದನ್ನು ಕಾಣುತ್ತೇವೆ. ಕೊಟ್ಟ ಮಗಳು ಗಂಡನ ಮನೆಯ ಬೆಳಕಾಗಿ ಸೊಸೆಯಾಗಿ ತವರಿನ ಕೀರ್ತಿ ತರುವುದು ತಾಯಿಯ ಹಂಬಲವಾಗಿದೆ. ಅದೇ ರೀತಿ ಗಂಡನ ಮನೆಯವರಿಗೂ ತಾಯಿ ತನ್ನ ಮಗಳನ್ನು ಒಳ್ಳೆಯ ರೀತಿಯಲ್ಲಿ ನೋಡಿಕೊಳ್ಳಲು ಕೇಳಿಕೊಳ್ಳುವುದು ಹೀಗಿದೆ-

ಚೊಚ್ಚಲ ಮಗಳನ್ನು ಹಚ್ಚಿಲ್ಲ ದಗದಕ
ಬಚ್ಚಲದಾನ ತುಳಸೀಯ | ತಾಮ್ರದ ಕೊಡ
ಎತ್ತಿಟ್ಟರ ಮಗಳದಣಿದಾಳ ||

ಎಂದು ಮಗಳನ್ನು ತಾವು ಬೆಳಸಿದ ರೀತಿಯ ಬಗ್ಗೆ ಹೇಳಿಕೊಳ್ಳುತ್ತಾಳೆ. ಇಲ್ಲಿ ಕೆಲಸ ಮಾಡಿ ಅನುಭವವಿಲ್ಲದ ತನ್ನ ಮಗಳನ್ನು ಚನ್ನಾಗಿ ನೋಡಿಕೊಳ್ಳಿ ಎಂದು ಕೇಳಿಕೊಳ್ಳುವುದನ್ನು ಕಾಣುತ್ತೇವೆ. ತಾಯಿಯಾದವಳಿಗೆ ತನ್ನ ಮಗಳ ಮೇಲೆ ಇರುವ ಗಾಡ ಪ್ರೀತಿ ವ್ಯಕ್ತವಾಗಿದೆ. ತಾಯಿ ತನ್ನ ಮಗಳ ಮೇಲೆ ಪ್ರೀತಿ ತೋರುವುದರ ಜೊತೆಗೆ ಅವಳು ತಪ್ಪು ಮಾಡಿದರೆ ಮಗಳ ತಪ್ಪನ್ನು ಖಂಡಿಸುವುದುಂಟು. ಮಗಳ ಗಂಡನ ಮನೆಯಲ್ಲಿ ಮನೆಯವರ ಆಶಯಗಳಿಗೆ ವಿರುದ್ಧವಾಗಿ ನಡೆದುಕೊಂಡರೆ ಅದರಿಂದ ತವರಿಗೆ ಕೆಟ್ಟ ಹೆಸರು ಬರುತ್ತದೆ. ಅಂತಹ ಸಂದರ್ಭದಲ್ಲಿ ತನ್ನ ಮಗಳ ಮೇಲೆ ಅಪಾರ ಪ್ರೀತಿ ಇದ್ದರೂ ನಿರ್ಧಯವಾಗಿ ಕಠೋರತೆಯನ್ನು ತೋರಬಲ್ಲಳು ಎಂಬ ನಿದರ್ಶನಗಳು ಜನಪದ ಹಾಡುಗಳಲ್ಲುಂಟು;

ಎಳೆಗರು ಎತ್ತಲ್ಲ ದಳವಾಯಿ ದೊರೆಯಲ್ಲ
ಮನೆಗೆ ಬಂದಳಿಯ ಮಗನಲ್ಲ | ತೌರಿಗೆ
ಮಾತು ತಂದೋಳು ಮಗಳಲ್ಲ ||

ಎಂದು ಕಠೋರವಾಗಿ ಮಾತನಾಡುತ್ತಾಳೆ. ತವರಿಗೆ ಕೆಟ್ಟ ಹೆಸರು ತಂದ ಮಗಳು ಮಗಳೆ ಅಲ್ಲವೆಂದು ಆಕೆಯ ಸಂಬಂಧವನ್ನೆ ತೊರೆಯಲು ನಿರ್ದರಿಸುತ್ತಾಳೆ.

ಹೆಣ್ಣು ಮಕ್ಕಳಿಗೆ ತಾಯಿ ಇದ್ದರೆ ತವರು. ತಾಯಿ ಇಲ್ಲದ ತವರು ತವರೆ ಅಲ್ಲ ಎಂಬ ಭಾವನೆ. ಅದೇ ರೀತಿ ತಾಯಿ ಇಲ್ಲದ ತವರಿಗೋದ ಹೆಣ್ಣು ಮಗಳೊಬ್ಬಳ ಅನುಭವವನ್ನು ಹಾಡೊಂದರಲ್ಲಿ ಹೇಳುವುದು ಹೀಗೆ-

ಹಡಗ ಇಲ್ಲದ ಹೊಳೆಯ ಕಡಗ ಇಲ್ಲದ ಕೈಯ
ಹಡದವ್ವನಿಲ್ಲದ ತವರೂರಕ | ಹ್ವಾದರ
ಅಡಿವ್ಯಾಗ ವಸ್ತಿ ಇಳಿದ್ಹಾಂಗ || ಎಂದು ಹಾಡಿದ್ದಾಳೆ.

ಈ ಹಾಡಿನಲ್ಲಿ ಹೊಳೆಗೆ ಹಡಗು, ಹೆಣ್ಣಿನ ಕೈಗೆ ಬಳೆ ಹೇಗೆ ಭೂಷಣವೋ ಅದೋ ರೀತಿ ತವರಿಗೆ ತಾಯಿ ಭೂಷಣ, ತಾಯಿ ತವರಿಗೆ ಕಳಶವಿದಂತೆ. ಅಂತಹ ಕಳಶವಿಲ್ಲದ ಮನೆಯಲ್ಲಿ ಉಳಿದುಕೊಂಡರೆ ಅಡವಿಯಲ್ಲಿ ಉಳಿದುಕೊಂಡಂತಾಗುತ್ತದೆಂದು ನೋವಿನಿಂದ ಹೇಳಿದ್ದಾರೆ.

### 1.3 ಕೊನೆಯಮಾತು:

ಹೀಗೆ ಜನಪದ ಹಾಡುಗಳಲ್ಲಿ ತಾಯಿ ಜಗದ ಮೂಲವಾಗಿ, ಮಮತೆ-ಮಾನವೀಯತೆಯ ಪ್ರತೀಕವಾಗಿ ಮೂಡಿಬಂದಿದ್ದಾರೆ. ಒಬ್ಬ ಹೆಣ್ಣು ಮಗಳಾಗಿ ಪತ್ನಿಯಾಗಿ, ತಾಯಿಯಾಗಿ, ವಿಶ್ವ ರೂಪಿಯಾಗಿ, ಶಕ್ತಿಯಾಗಿ, ತ್ಯಾಗಮೂರ್ತಿಯಾಗಿ, ಜೀವನದ ಅಖಂಡ ಶಕ್ತಿಯಾಗಿರುವುದನ್ನು ಜನಪದ ಹಾಡುಗಳಲ್ಲಿ ಕಾಣುತ್ತೇವೆ. ಅದನ್ನು ಅವಳು ಮಕ್ಕಳ ಪಡೆಯಲು ಹಂಬಲಿಸುವ ಪರಿ, ಅಡೆದ ಮಕ್ಕಳ ಪಾಲನೆ ಮಾಡುವುದು,

ಮಕ್ಕಳು ಎಷ್ಟೆ ನೋವು ಕೊಟ್ಟರು ಮಕ್ಕಳನ್ನು ಮಮತೆಯಿಂದ ನೋಡಿಕೊಳ್ಳುವುದು, ಬೆಳೆದ ಮಕ್ಕಳ ಮದುವೆ ಮಾಡಿ ಸಂತೋಷ ಪಡುವುದು, ಗಂಡನ ಮನೆಯಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಮಗಳಿಗೆ ತಿಳಿಸಿಕೊಡುವುದು ಹೀಗೆ ಮಕ್ಕಳಲ್ಲಿ ಒಳ್ಳೆಯ ಗುಣಗಳನ್ನು ತುಂಬುತ್ತ, ಮಕ್ಕಳ ಪ್ರತಿಯೊಂದು ಒಳ್ಳೆಯ ಬೆಳವಣಿಗೆಯಲ್ಲು ಸಂತೋಷ ಕಾಣುವಳು 'ತಾಯಿ' ಎಂದು ಹೇಳಬಹುದು.

**ಆಧಾರ ಗ್ರಂಥಗಳು**

1. ಕೆ. ಎನ್. ಗಂಗಾನಾಯಕ್ - ಕನ್ನಡ ಜನಪದ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.
2. ಡಿ. ಡಿ. ನಗರಕರ - ಜನಪದ ಗೀತೆಗಳಲ್ಲಿ, ತಾಯಿ, ಜೀವನ ಮೌಲ್ಯಗಳು, ಪ್ರಸಾರಾಂಗ, ಕ.ವಿ.ವಿ. ಧಾರವಾಡ.
3. ಹಿ. ಶ. ರಾಮಚಂದ್ರ ಗೌಡ - ಜಾನಪದ ಗಹಿಕೆ ; ಪರಿಕಲ್ಪನೆ, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು.
4. ಬಿ. ಎಸ್. ಗದ್ದಗೀಮಠ – ಜನತಾ ಗೀತೆಗಳು, ಸಹಕಾರಿ ಸಾಹಿತ್ಯ ಸಂಘ, ಧಾರವಾಡ.
5. ಹಲಸಂಗಿ ಗೆಳೆಯರು – ಗರತಿಯ ಹಾಡು (ಸಂಗ್ರಹ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಎಲ್. ಆರ್. ಹೆಗಡೆ – ಹಾಲಿನ ತೆನೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

Licensed under Creative Commons Attribution-ShareAlike 4.0 International License